# ಡಿಸಿಆರ್‌ನಿಂದ ಪ್ಲಾಸ್ಟಿಕ್ ಕಸ ನಿರ್ವಹಣೆ ಕಾರ್ಯಕ್ರಮ





ಪುತ್ತೂರು: ರಾಷ್ಟ್ರೀಯ ಗೇರು ಸಂಶೋಧನಾ ನಿರ್ದೇಶನಾಲಯ ಮೊಟ್ಟೆತ್ತಡ್ಕ ಮತ್ತು ಸ.ಪ್ರ.ದ. ಮಹಿಳಾ ಕಾಲೇಜು ಎನ್.ಎಸ್.ಎಸ್. ಘಟಕದ ಸಹಯೋಗದೊಂದಿಗೆ ಪ್ಲಾಸ್ಟಿಕ್ ಕಸ ನಿರ್ವಹಣೆ ಕಾರ್ಯಕ್ರಮ ಸೆ.21ರಂದು ಪುತ್ತೂರು ಪೇಟೆಯಲ್ಲಿ ನಡೆಯಿತು. ಪುತ್ತೂರು ನಗರಸಭೆ ಪೌರಾಯುಕ್ತೆ ರೂಪಾ ಶೆಟ್ಟಿಯವರು ಉದ್ಘಾಟಿಸಿ ಮಾತನಾಡಿ, ಪ್ಲಾಸ್ಟಿಕ್ ಮುಕ್ತ, ಸ್ವಚ್ಛ ಪುತ್ತೂರು ಮಾಡುವ ಕನಸು ಹೊತ್ತ ನಗರ ಸಭೆ ಹಲವು ಕಾರ್ಯಕ್ರಮಗಳನ್ನು ಮಾಡುತ್ತಿದೆ. ಈ ತಿಂಗಳ ಕೊನೆಗೆ ಪುತ್ತೂರನ್ನು ಸ್ವಚ್ಛ ನಗರ ಎಂದು ಘೋಷಣೆ ಮಾಡುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು. ಡಿಸಿಆರ್ ನಿರ್ದೇಶಕ ಎಂ.ಜಿ. ನಾಯಕ್, ಕಾಲೇಜಿನ ಉಪ ಪ್ರಾಂಶುಪಾಲ ಸ್ಟೀವನ್ ಕ್ವಾಡ್ರಸ್ ಮತ್ತಿತರರು ಉಪಸ್ಥಿತ ರಿದ್ದರು. ಡಿಸಿಆರ್ ವಿಜ್ಞಾನಿ ಟಿ.ಎನ್. ರವಿಪ್ರಸಾದ್ ಸ್ವಾಗತಿಸಿದರು.